ಜಿಲ್ಲಾ ಯೋಜನಾ ಸಮಿತಿಗಳು

2871 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಯೋಜನಾ ಸಮಿತಿಗಳನ್ನು ಇನ್ನೂ ಏಕೆ ಕಾರ್ಯಾರಂಭಗೊಳಿಸಿರುವುದಿಲ್ಲ?

ಆ) ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು ಯಾರು?

ಇ) ಈ ಆಯ್ಕೆ ಯಾವಾಗ ನಡೆಯುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಪಿ.ಆರ್. ನಾಯಕ್ ತಜ್ಞರ ಸಮಿತಿಯ ಶಿಫಾರಸ್ಸಿನಂತೆ ಜಿಲ್ಲಾ ಯೋಜನಾ ಸಮಿತಿಗೆ ಅಧ್ಯಕ್ಷರ ಆಯ್ಕೆ ಬಗ್ಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮಕ್ಕೆ ತಿದ್ದುಪಡಿ ತರಲು ಸರ್ಕಾರ ಪರಿಶೀಲಿಸುತ್ತಿದೆ ಮತ್ತು ರಾಜ್ಯದಲ್ಲಿ 7 ಹೊಸ ಜಿಲ್ಲೆಗಳನ್ನು ರಚಿಸಿರುವುದರಿಂದ, ಜಿಲ್ಲಾ ಯೋಜನಾ ಸಮಿತಿಗೆ ಅಧ್ಯಕ್ಷರ ಚುನಾವಣೆ ನಡೆಸಿರುವುದಿಲ್ಲ. ಆದುದರಿಂದ, ಜಿಲ್ಲಾ ಯೋಜನಾ ಸಮಿತಿಗಳು ಕಾರ್ಯಾರಂಭ ಮಾಡಿರುವುದಿಲ್ಲ.

ಆ) ಹಾಲಿ ಜಾರಿಯಲ್ಲಿರುವ ಅಧಿನಿಯಮದ ಅನುಸಾರ ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷರನ್ನು ಸದಸ್ಯರಲ್ಲಿ ಆಯ್ಕೆ ಮಾಡಬೇಕಾಗಿದೆ. ಉಪಾದ್ಯಕ್ಷರು ಇರುವುದಿಲ್ಲ.

ಇ) ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ಕ್ಕೆ ತಿದ್ದುಪಡಿ ಹೊರಡಿಸಿದ ನಂತರ ಜಿಲ್ಲಾ ಯೋಜನಾ ಸಮಿತಿಗೆ ಅಧ್ಯಕ್ಷ ಆಯ್ಕೆ ಮಾಡಲಾಗುವುದು.

ಡೆಂಟಲ್ ವಿಭಾಗಕ್ಕೆ ಖರೀದಿಸಿದ ಸಲಕರಣೆಗಳು

2872 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಡೆಂಟಲ್ ವಿಭಾಗಕ್ಕೆ ಎಷ್ಟು ಲಕ್ಷ ರೂಪಾಯಿಯ ಸಲಕರಣೆಗಳನ್ನು ತೆಗೆದುಕೊಳ್ಳಲಾಗಿದೆ? (ಸಲಕರಣೆವಾರು ವಿವರ ನೀಡುವುದು)?

ಆ) ರಾಜ್ಯದ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಸಲಕರಣೆಗಳನ್ನು ಕಳುಹಿಸಿಕೊಡಲಾಗಿದೆ? (ವಿವರ ಕೊಡುವುದು) ಈ ಸಲಕರಣೆಗಳನ್ನು ಯಾವ ಕಂಪನಿಯಿಂದ ಖರೀದಿಸಲಾಗಿದೆ? (ವಿವರ ಕೊಡುವುದು)?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಈ ಕೆಳಕಂಡ ಉಪಕರಣಗಳನ್ನು ಖರೀದಿಸಲಾಗಿದೆ.

ಉಪಕರಣಗಳ ಹೆಸರು	ಖರೀದಿಸಿದ ಒಟ್ಟು ಸಂಖ್ಯೆ	ಒಟ್ಟು ಮೊತ್ತ
(1) ಡೆಂಟಲ್ ಯೂನಿಟ್	70	9,32,277.00
(2) ಡೆಂಟಲ್ ಫೇರ್	60	12,07,652.00
(3) ಡೆಂಟಲ್ ಕಿಟ್	138	4,33,359.00
(4) ಡೆಂಟಲ್ ಲ್ಯಾಬ್	13	10,38,796.00
(5) ಏರ್ ರೋಟರ್	31	10,59,052.00
	ಒಟ್ಟು	**46,71,136.00**

ಆ) ಈ ವಿವರಗಳನ್ನು ಅನುಬಂಧ 1ರಲ್ಲಿ ಕೊಡಲಾಗಿದೆ. ಹಾಗೂ ಈ ಉಪಕರಣಗಳನ್ನು ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ನ್ಯಾಷನಲ್ ಕಾಂಪಿಟೆಟೀವ್ ಬಿಡ್ಡಿಂಗ್ ಅನ್ವಯ ಮೆ: ಕಾನ್ಫಿಡೆಂಟ್ ಡೆಂಟಲ್ ಎಕ್ವಿಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಂದ ಖರೀದಿಸಲಾಗಿದೆ.

ಅನುಬಂಧ - 1

ಕ್ರಮ ಸಂಖ್ಯೆ	ಸ್ಥಳ	ಡೆಂಟಲ್ ಯೂನಿಟ್	ಡೆಂಟಲ್ ಫೇರ್	ಏರ್ ರೋಟರ್	ಡೆಂಟಲ್ ಲ್ಯಾಬ್	ಡೆಂಟಲ್ ಕಿಟ್
1	2	3	4	5	6	7
ಬೆಂಗಳೂರು ಜಿಲ್ಲೆ						
1.	ಹೊಸಕೋಟೆ	1	1			1
2.	ದೇವನಹಳ್ಳಿ	1	1			1
3.	ಮಾಗಡಿ	1	1			1
4.	ಆನೇಕಲ್		1			1
5.	ನೆಲಮಂಗಲ					1
6.	ದೊಡ್ಡಬಳ್ಳಾಪುರ					1
ಬೆಳಗಾಂ ಜಿಲ್ಲೆ						
1.	ಖಾನಾಪುರ	1	1			1
2.	ಎರಗಟ್ಟಿ	1	1			1

1	2	3	4	5	6	7
3.	ಸೌಂದತ್ತಿ ಎಲ್ಲಮ್ಮ	1	1			1
4.	ಕಿತ್ತೂರು	1	1			1
5.	ಬೈಲಹೊಂಗಲ	1	1			1
6.	ಅಥಣಿ	1	1			1
7.	ಚಿಕ್ಕೋಡಿ					1
ಬಿಜಾಪುರ ಜಿಲ್ಲೆ						
1.	ಬಸವನ ಬಾಗೇವಾಡಿ	1	1			1
2.	ಮುದ್ದೇಬಿಹಾಳ	1	1			1
3.	ಬಿಳಗಿ	1	1			1
4.	ಜಮಖಂಡಿ	1	1	1		2
5.	ರಬಕವಿ ಬನಕಟ್ಟಿ	1	1			1
6.	ತಾಲಿಕೋಟೆ	1	1			1
7.	ಮಹಾಲಿಂಗಪುರ	1	1			1
8.	ಮುಧೋಳ	1	1			1
ಚಿಕ್ಕಮಗಳೂರು ಜಿಲ್ಲೆ						
1.	ಬೀರೂರು	1				1
2.	ತರೀಕೆರೆ	1				1
3.	ಎನ್.ಆರ್. ಪುರ	1	1			1
4.	ಶ್ರಿಂಗೇರಿ	1	1			1
5.	ಕೊಪ್ಪ					1
6.	ಚಿಕ್ಕಮಗಳೂರು	1				
ಚಿತ್ರದುರ್ಗ ಜಿಲ್ಲೆ						
1.	ಹೊಳಲ್ಕೆರೆ	1	1			1
2.	ಚಳ್ಳಕೆರೆ	1	1			1

1	2	3	4	5	6	7
3.	ನಾಯಕನಹಟ್ಟಿ	1	1			1
4.	ಪರಶುರಾಮಪುರ	1	1			1
5.	ಮೊಳಕಾಲ್ಮೂರು	1	1			1
6.	ಹಿರಿಯೂರು	1	1	1		1
7.	ಚಿತ್ರದುರ್ಗ		1	1	1	1
ದಕ್ಷಿಣ ಕನ್ನಡ ಜಿಲ್ಲೆ						
1.	ಬಂಟ್ವಾಳ	1	1			1
2.	ಮುಲ್ಕಿ	1	1	1		1
3.	ಪುತ್ತೂರು	1	1	1		1
4.	ಕಾರ್ಕಳ	1		1		1
5.	ನಿಟ್ಟೆ	1	1			1
6.	ಕುಂದಾಪುರ	1		1		1
7.	ಶಿರ್ವಾ	1	1			1
8.	ಸುಳ್ಯ		1			
9.	ಉಡುಪಿ	1		2		1
10.	ಮಂಗಳೂರು	1		1	2	1
11.	ಬೆಳ್ತಂಗಡಿ					1
ಧಾರವಾಡ ಜಿಲ್ಲೆ						
1.	ನರಗುಂದ	1	1			1
2.	ಬ್ಯಾಡಗಿ	1	1			1
3.	ರಾಣೆಬೆನ್ನೂರು	2	2			2
4.	ಹಾನಗಲ್	1	1			1
5.	ಧಾರವಾಡ			1	1	3
6.	ಹಾವೇರಿ					2

1	2	3	4	5	6	7
ಕೊಡಗು ಜಿಲ್ಲೆ						
1.	ಮಡಿಕೇರಿ	1	1	1	1	3
2.	ಸೋಮವಾರಪೇಟೆ	1	1	1		3
3.	ಗೋಣಿಕೊಪ್ಪಲ್					1
ಕೋಲಾರ ಜಿಲ್ಲೆ						
1.	ಬಾಗೇಪಲ್ಲಿ	1				1
2.	ಬಂಗಾರಪೇಟೆ	1	1			1
3.	ರಾಬರ್ಟ್‌ಸನ್‌ಪೇಟೆ	1	1			1
4.	ಚಿಕ್ಕಬಳ್ಳಾಪುರ	1		1		2
5.	ಚಿಂತಾಮಣಿ	1	1	1		2
6.	ಗೌರಿಬಿದನೂರು	1	1	1		2
7.	ಬಟ್ಲಹಳ್ಳಿ	1	1			1
8.	ಗುಡಿಬಂಡೆ					1
9.	ಶಿಡ್ಲಘಟ್ಟ					1
10.	ಕೋಲಾರ					3
ಮೈಸೂರು ಜಿಲ್ಲೆ						
1.	ಪಿರಿಯಾಪಟ್ಟಣ	1	1			1
2.	ಬನ್ನೂರು	1	1			1
3.	ತಲಕಾಡು	1	1			1
4.	ಹೆಗ್ಗಡದೇವನ ಕೋಟೆ					1
5.	ಕಬ್ಬಹಳ್ಳಿ	1	1			2
6.	ಹುಣಸೂರು			1		2
7.	ಟಿ. ನರಸೀಪುರ					2
8.	ನಂಜನಗೂಡು	1	1	1		2
9.	ಸಾಲಿಗ್ರಾಮ	1	1			2
10.	ಯಳಂದೂರು		1			1

1	2	3	4	5	6	7
ತುಮಕೂರು ಜಿಲ್ಲೆ						
1.	ಕುಣಿಗಲ್	1	1			1
2.	ಚಿಕ್ಕನಾಯಕನಹಳ್ಳಿ	1	1			1
3.	ಗುಬ್ಬಿ	1	1			1
4.	ತುರುವೇಕೆರೆ	1	1			1
5.	ತಿಪಟೂರು			1		2
6.	ತುಮಕೂರು				1	3
7.	ಕೊರಟಗೆರೆ					1
ಹಾಸನ ಜಿಲ್ಲೆ						
1.	ಹಿರಿಸಾವೇ	1	1			1
2.	ಬೇಲೂರು	1	1			1
3.	ಹೊಳೆನರಸೀಪುರ	1	1	1		2
4.	ಅರಸೀಕೆರೆ			1		2
ಮಂಡ್ಯ ಜಿಲ್ಲೆ						
1.	ಕೆ.ಎಂ. ದೊಡ್ಡಿ	1	1			1
2.	ನಾಗಮಂಡಲ		1			1
3.	ಮಳವಳ್ಳಿ		1			2
ಶಿವಮೊಗ್ಗ ಜಿಲ್ಲೆ						
1.	ಭದ್ರಾವತಿ	1	1			1
2.	ಚನ್ನಗಿರಿ	1	1			1
3.	ತೀರ್ಥಹಳ್ಳಿ	1	1	1		2
4.	ಶಿವಮೊಗ್ಗ			1	1	3
5.	ಹೊನ್ನಳ್ಳಿ			1		1
6.	ಹೊಸನಗರ					1

1	2	3	4	5	6	7
ಉತ್ತರ ಕನ್ನಡ ಜಿಲ್ಲೆ						
1.	ಹೊನ್ನಾವರ					1
2.	ಅಂಕೋಲ					1
3.	ಹಳಿಯಾಳ		1	2	1	1
4.	ಸುಪಾ (ಜೋಯ್ಡಾ)	1		1	1	1
5.	ಯಲ್ಲಾಪುರ	1		1	1	1
6.	ದಾಂಡೇಲಿ				1	1
7.	ಭಟ್ಕಳ	1	1	1	1	1
8.	ಸಿರ್ಸಿ				1	2

ಪ್ರಾಥಮಿಕ ಶಾಲೆಗಳನ್ನು ತೆರೆಯುವ ಕುರಿತು

2873 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 20ರಿಂದ 25 ಜನ ವಿದ್ಯಾರ್ಥಿಗಳಿರುವ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಯನ್ನು ತೆರೆಯಲು ಸರ್ಕಾರವು ನಿರ್ಧಿಸಿರುವುದು ನಿಜವೇ; ಹಾಗಿದ್ದಲ್ಲಿ ಈ ಕುರಿತು ಆದೇಶ ಯಾವಾಗ ಜಾರಿ ಮಾಡಲಾಗುವುದು?

ಆ) ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಲ್ಲಿ ಶಾಲೆಯನ್ನು ಮಂಜೂರು ಮಾಡಲು ಗುರುತಿಸಲಾಗಿದೆ?

ಇ) ಕೊಡಗು ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳನ್ನು ಗುರುತಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) 20ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿರುವ ಕ್ರಮ ದಿ: 7.6.96 ರಿಂದ ಜಾರಿಯಲ್ಲಿದೆ.

ಆ) ರಾಜ್ಯದ 20 ಜಿಲ್ಲೆಗಳಲ್ಲಿ 1469 ಹೊಸ ಪ್ರಾಥಮಿಕ ಶಾಲೆಗಳನ್ನು 1997-98ನೇ ಸಾಲಿನಲ್ಲಿ ಗುರುತಿಸಿ ಆರಂಭಿಸಲಾಗಿದೆ.

ಇ) ಕೊಡಗು ಜಿಲ್ಲೆಯಲ್ಲಿ 35 ಗ್ರಾಮಗಳನ್ನು ಗುರುತಿಸಲಾಗಿದೆ.

ಮಡಿಕೇರಿ	07
ವಿರಾಜಪೇಟೆ	15
ಸೋಮವಾರಪೇಟೆ	13